**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 567/2019**

**ಸಾಕ್ಷಿಗೆ ದಿನಾಂಕ 11.9.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅಶೋಕ್ ವಿ ಸಿ | ಪಿ.ಡಬ್ಲ್ಯೂ-14 |
| ತಂದೆಯ/ಗಂಡನ ಹೆಸರು | : | ಚಿಕ್ಕಮಂಟಯ್ಯ | ಸಿ.ಡಬ್ಲ್ಯೂ-41 |
| ವಯಸ್ಸು | : | 37 | |
| ಉದ್ಯೋಗ | : | ಪಿ.ಎಸ್.ಐ | |
| ವಾಸಸ್ಥಳ | : | ಬೆಳಕವಾಡಿ | |

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು 26.6.2016 ರಿಂದ 8.3.2019 ಮತ್ತು ದಿನಾಂಕ 14.6.2019 ರಿಂದ 11.7.20019 ರವರೆಗೆ ಹೆಚ್.ಡಿ.ಕೋಟೆ ಪೋಲೀಸ್ ಠಾಣೆಯಲ್ಲಿ ಉಪನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 27.3.2018 ರಂದು ಈ ಕೇಸಿನ ಕಡತವನ್ನು ಚಾಸ39 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿರುತ್ತೇನೆ. ಅದೇ ದಿನ ಕೋಹಳ ಗ್ರಾಮಕ್ಕೆ ಭೇಟಿ ನೀಡಿ ಚಾಸ1 ರವರು ತೋರಿಸಿದ ಮೃತದೇಹ ಹೂತಿದ್ದ ಸ್ಥಳವನ್ನು ಪರಿಶೀಲಿಸಿ ಪಂಚರಾದ 4 ಮತ್ತು 5 ರವರ ಸಮಕ್ಷಮ ಬೆಳಿಗ್ಗೆ 10 ರಿಂದ 10.45 ರವರೆಗೆ ನಿಪಿ3 ರಂತೆ ಸ್ಥಳ ಮಹಜರನ್ನು ಮಾಡಿರುತ್ತೇನೆ. ನಿಪಿ3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ3 ಸಿ ಎಂದು ಗುರುತಿಸಲಾಯಿತು. ನಂತರ ಅದೇ ದಿನ ಆರೋಪಿಯ ವಾಸದ ಮನೆಗೆ ಭೇಟಿ ನೀಡಿ ಪರಿಶೀಲಿಸಿ ಆರೋಪಿಯು ಪಿರ್ಯಾದಿ ಮಗನಿಗೆ ಅನಾರೋಗ್ಯದ ನಿಮಿತ್ತ ಇಂಜಕ್ಷನ್ ನೀಡಿರುವ ಸ್ಥಳವನ್ನು ತೋರಿಸಿದ ಮೇರೆಗೆ, ಚಾಸ2 ಮತ್ತು 3 ರವರಿಗೆ ಲಿಖಿತ ನೋಟಿಸನ್ನು ನೀಡಿ ಪಂಚರಾಗಿ ಮಾಡಿಕೊಂಡು ಬೆಳಿಗ್ಗೆ 11.30 ರಿಂದ 12.30 ವರೆಗೆ ನಿಪಿ2 ರಂತೆ ಪಂಚನಾಮೆಯನ್ನು ಮಾಡಿರುತ್ತೇನೆ. ನಿಪಿ2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ2 ಬಿ ಎಂದು ಗುರುತಿಸಲಾಯಿತು. ಸಾಕ್ಷಿದಾರರಿಗೆ ನೀಡಿರುವ ನೋಟಿಸನ್ನು ನಿಪಿ26 ಎಂದು ಸಾಕ್ಷಿಯ ಸಹಿಯನ್ನು ನಿಪಿ26 ಎ ಎಂದು ಗುರುತಿಸಲಾಯಿತು. ನಂತರ ಅದೇ ದಿನ ಆರೋಪಿ ಪತ್ತೆಗೆ ಪ್ರಯತ್ನಿಸಿದ್ದು, ಆರೋಪಿಯು ತಲೆ ಮರೆಸಿಕೊಂಡಿರುತ್ತಾನೆ. ದಿನಾಂಕ 28.3.2018 ರಂದು ಹೂತಿರುವ ಮೃತದೇಹವನ್ನು ಹೊರತೆಗೆದು ಮರುಪರೀಕ್ಷೆ ಮಾಡಲು ಅನುಮತಿ ನೀಡುವಂತೆ ಹುಣಸೂರಿನ ಎ.ಸಿ ರವರಿಗೆ ಪತ್ರ ಬರೆದಿರುತ್ತೇನೆ. ಸಾಕ್ಷಿದಾರರು ಸದರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ27 ಎಂದು, ಸಾಕ್ಷಿಯ ಸಹಿಯನ್ನು ನಿಪಿ27 ಎ ಎಂದು ಗುರುತಿಸಲಾಯಿತು. ನಂತರ ಅದೇ ದಿನ ಸಾಕ್ಷಿದಾರರಾದ ಚಾಸ10 ರಿಂದ 16 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 29.3.2018 ರಂದು ಚಾಸ17 ರಿಂದ 24 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 30.3.2018 ರಂದು ಸಾಕ್ಷಿದಾರರಾದ ಚಾಸ25 ರಿಂದ 30 ರವರ

ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 6.4.2018 ರಂದು ಹುಣಸೂರು ಎ.ಸಿ ರವರಿಂದ ಶವವನ್ನು ಹೊರತೆಗೆದು ಮರುಪರೀಕ್ಷೆ ಮಾಡಲು ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 15.5.2018 ರಂದು ಆರೋಪಿಯು ನಿರೀಕ್ಷಣಾ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು, ಆತನನ್ನು ವಿಚಾರಣೆಗೊಳಪಡಿಸಿ ಆತನು ಹಾಜರುಪಡಿಸಿದ ಡಿಪ್ಲೋಮಾ ಕೋರ್ಸಿಗೆ ಸಂಬಂಧಿಸಿದ ಜೆರಾಕ್ಸ ಪ್ರತಿಯನ್ನು ಪಡೆದುಕೊಂಡು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 17.7.2018 ರಂದು ತಾಲ್ಲೂಕು ತಹಶೀಲ್ದಾರ್‌ರವರು ಮೃತದೇಹವನ್ನು ಹೊರತೆಗೆದು ಮೈಸೂರಿನ ಕೆ.ಆರ್.ಆಸ್ಪತ್ರೆ ವೈದ್ಯಾಧಿಕಾರಿಯವರಿಂದ ಶವ ಪರೀಕ್ಷೆ ಮಾಡಲು ಅನುಮತಿ ನೀಡಿದ್ದು, ಮಾನ್ಯ ತಹಶೀಲ್ದಾರ್ ಮತ್ತು ಕೆ.ಆರ್.ಆಸ್ಪತ್ರೆ ವೈದ್ಯಾಧಿಕಾರಿಯವರು ಮೃತದೇಹವನ್ನು ಹೊರತೆಗೆದು ಶವ ಪರೀಕ್ಷೆ ಮಾಡಿದ್ದು, ಸದರಿ ಸಮಯದಲ್ಲಿ ನಮ್ಮ ಠಾಣೆಯ ಸಿಬ್ಬಂಧಿಯಾದ ಚಾಸ 37 ಆದ ಚಂದ್ರಶೇಖರ್ ರವರು ಭಾವಚಿತ್ರವನ್ನು ತೆಗೆದಿದ್ದು, ಸದರಿ ಭಾವಚಿತ್ರಗಳು ಮತ್ತು ಸಿ.ಡಿ ಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅಲ್ಲದೇ ಚಾಸ 37 ರವರು ನೀಡಿರುವ ಕಲಂ 65 ಬಿ ಸಾಕ್ಷಿ ಅಧಿನಿಯಮ ದೃಢೀಕರಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಭಾವಚಿತ್ರಗಳು ಈಗಾಗಲೇ ನಿಪಿ5 ರಿಂದ ನಿಪಿ16 ಎಂದು ಗುರುತಾಗಿದ್ದು, ಸಿ.ಡಿ ಯನ್ನು ನಿಪಿ28 ಎಂದು ಗುರುತಿಸಲಾಯಿತು.

65 ಬಿ ಸಾಕ್ಷಿ ಅಧಿನಿಯಮ ದೃಢೀಕರಣ ಪತ್ರವನ್ನು ನಿಪಿ29 ಎಂದು ಗುರುತಿಸಲಾಯಿತು. ದಿನಾಂಕ 21.7.2018 ರಂದು ಜೆ.ಎಸ್.ಎಸ್ ಆಸ್ಪತ್ರೆ ಮತ್ತು ಕೆ.ಆರ್.ಆಸ್ಪತ್ರೆ ರವರಿಗೆ ಮೃತ ನಾಗರಾಜು ರವರು ಚಿಕಿತ್ಸೆ ಪಡೆದುಕೊಂಡಿರುವ ಬಗ್ಗೆ ಕೇಸ್ ಶೀಟ್ ಮತ್ತು ಇತರೆ ದಾಖಲಾತಿಗಳನ್ನು ಒದಗಿಸುವಂತೆ ಮನವಿ ನೀಡಿರುತ್ತೇನೆ. ಸದರಿ ಮನವಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ನಿಪಿ30 ಎಂದು, ಸಾಕ್ಷಿಯ ಸಹಿಯನ್ನು ನಿಪಿ30 ಎ ಎಂದು ಗುರುತಿಸಲಾಯಿತು. ದಿನಾಂಕ 26.7.2018 ರಂದು ತಹಶೀಲ್ದಾರ್, ಹೆಚ್.ಡಿ.ಕೋಟೆ ರವರಿಂದ ಮೃತ ನಾಗರಾಜು ರವರ ಶವವನ್ನು ಹೊರತೆಗೆದು ಮಾಡಿರುವ ಶವ ಪಂಚನಾಮೆಯನ್ನು ನಿಪಿ4 ರಂತೆ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ 2.8.2018 ರಂದು ಜೆ.ಎಸ್.ಎಸ್ ಆಸ್ಪತ್ರೆ, ಮೈಸೂರು ಇವರಿಂದ ಮೃತ ನಾಗರಾಜು ರವರ ಚಿಕಿತ್ಸೆಯ ಕೇಸ್ ಶೀಟನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿದಾರರು ಸದರಿ ಕೇಸ್‌ಶೀಟನ್ನು ನೋಡಿ ಗುರುತಿಸಿದ್ದು, ಸದರಿ ಕೇಸ್ ಶೀಟನ್ನು (11 ಪುಟ) ನಿಪಿ31 ಎಂದು ಗುರುತಿಸಲಾಯಿತು. ದಿನಾಂಕ 3.8.2018 ರಂದು ಚಾಸ 38 ರವರು ಕೆ.ಆರ್.ಆಸ್ಪತ್ರೆಯಲ್ಲಿ ಮೃತನ ಮರಣೋತ್ತರ ಪರೀಕ್ಷೆಯ ಸಮಯದಲ್ಲಿ ವೈದ್ಯಾಧಿಕಾರಿಯವರು ರಸಾಯನಿಕ ಪರೀಕ್ಷೆಗೆ ಸಂಗ್ರಹಿಸಿದ್ದ ವಸ್ತುಗಳನ್ನು ಮತ್ತು ವರದಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಪಡೆದುಕೊಂಡು ಸ್ವತ್ತುಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯದ ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 10.8.2018 ರಂದು ರಸಾಯನಿಕ ಪರೀಕ್ಷೆಗೆ ಸಂಗ್ರಹಿಸಿಕೊಟ್ಟಿದ್ದ ವಸ್ತುಗಳನ್ನು ಸಿಬ್ಬಂಧಿಯ ಮೂಲಕ ಮೈಸೂರಿನ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತೇನೆ. ದಿನಾಂಕ 31.10.2018 ರಂದು ಎಫ್.ಎಸ್.ಎಲ್ ವರದಿಯನ್ನು ನಿಪಿ21 ರಂತೆ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಿಪಿ21 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ21 ಬಿ ಎಂದು ಗುರುತಿಸಲಾಯಿತು. ದಿನಾಂಕ 14.12.2018 ರಂದು ಮೃತ ನಾಗರಾಜು ಈತನ ಚಿಕಿತ್ಸೆಗೆ ಸಂಬಂಧಪಟ್ಟ ದಾಖಲಾತಿಗಳನ್ನು ಕೆ.ಆರ್.ಆಸ್ಪತ್ರೆ, ಮೈಸೂರು ರವರಿಂದ

ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲಾತಿಯನ್ನು (ಒಟ್ಟು 10 ಪುಟ) ನಿಪಿ32 ಎಂದು ಗುರುತಿಸಲಾಯಿತು. ದಿನಾಂಕ 17.12.2018 ರಂದು ಮೃತ ವ್ಯಕ್ತಿಯ ಪಿ.ಎಂ ವರದಿಯನ್ನು ನೀಡುವಂತೆ ಕೇಳಿಕೊಂಡಿರುತ್ತೇನೆ. ಸಾಕ್ಷಿದಾರರು ಸದರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ33 ಎಂದು, ಸಾಕ್ಷಿಯ ಸಹಿಯನ್ನು ನಿಪಿ33 ಎ ಎಂದು ಗುರುತಿಸಲಾಯಿತು. ದಿನಾಂಕ 1.1.2019 ರಂದು ಮೃತ ವ್ಯಕ್ತಿಯ ಅಂತಿಮ ಪಿ.ಎಂ ವರದಿಯನ್ನು ನಿಪಿ20 ರಂತೆ ಪಡೆದುಕೊಂಡಿರುತ್ತೇನೆ. ದಿನಾಂಕ 8.3.2019 ರಂದು ನನಗೆ ವರ್ಗಾವಣೆಯಾಗಿದ್ದರಿಂದ ಕಡತವನ್ನು ಮುಂದಿನ ತನಿಖೆಗಾಗಿ ಚಾಸ 40 ರವರಿಗೆ ವರ್ಗಾಯಿಸಿರುತ್ತೇನೆ. ದಿನಾಂಕ 14.6.2019 ರಂದು ಕೇಸಿನ ಕಡತವನ್ನು ಪುನಃ ಚಾಸ 40 ರವರಿಂದ ಪಡೆದುಕೊಂಡಿರುತ್ತೇನೆ. ನಂತರ ತನಿಖೆ ಪೂರ್ಣಗೊಂಡಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಬರಬೇಕಾಗಿದ್ದ ವರದಿಯನ್ನು ಕಾಯ್ದಿರಿಸಿ ದಿನಾಂಕ 23.6.2019 ರಂದು ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಪಾಟೀ ಸವಾಲಿಗೆ ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ